ಬೆಂಗಳೂರಿನ ಎಂ.ಜಿ. ರಸ್ತೆಯ ಟ್ರಿನಿಟಿ ವೃತ್ತದ ಬಳಿಯಲ್ಲಿನ 'ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ'ಯಲ್ಲಿ ಸುಬ್ರಹ್ಮಣ್ಯ ಅವರ ಏಕವ್ಯಕ್ತಿ ವ್ಯಂಗ್ಯಚಿತ್ರಗಳ ಪ್ರದರ್ಶನ ನಡೆಯುತ್ತಿದೆ. ಮಾರ್ಚ್ 28ರವರೆಗೂ ಈ ಪ್ರದರ್ಶನ ನಡೆಯಲಿದೆ.




ಲಂಚ ಎಷ್ಟು ಹೇಳಿಬಿಡಿ, ಆನ್ ಲೈನ್‌ನಲ್ಲೇ ಪೇ ಮಾಡ್ತೀನಿ ಸಾರ್...




ನೀನೂ ರಾಜ್ಯೋತ್ಸವ ಪ್ರಶಸ್ತಿ ತಗೊಂಡ್ಯಾ.. ಎಷ್ಟ್ ಬಿತ್ತು...?

ಕಾಲ ಕೆಲಸದ ಒತ್ತಡದಲ್ಲಿ ವ್ಯಂಗ್ಯಚಿತ್ರ ರಚನೆ ನಿಲ್ಲಿಸಿದ್ದೆ. 2015ರಲ್ಲಿ ನಿವೃತ್ತಿಯಾದ ಕೂಡಲೇ ಮತ್ತೆ ಹಳೆಯ ಜಾಡನ್ನು ಹಿಡಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ಪತ್ರಿಕೆಗಳಿಗೆ ಪಾಕೆಟ್ ಕಾರ್ಟೂನ್ ರಚಿಸುವ ಮೂಲಕ ಮತ್ತೆ ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಕೊಂಡಿದ್ದೇನೆ.

**◆ ಹೊಸ ಹೊಸ ವಿಧಾನಗಳಲ್ಲಿ ವ್ಯಂಗ್ಯಚಿತ್ರಗಳನ್ನು ರಚಿಸುವ ಪ್ರಯತ್ನ ನಡೆದಿದೆಯಾ?**

ಮೊದಲೆಲ್ಲ ಮುದ್ರಣಗೊಳ್ಳುವ ಅಳತೆಯಲ್ಲೇ ಪೆನ್ ಮೂಲಕ ವ್ಯಂಗ್ಯಚಿತ್ರಗಳನ್ನು ರಚಿಸುತ್ತಿದ್ದೆ. ಆದರೆ ಕೆಲವು ವರ್ಷಗಳ ನಂತರ ಹಿರಿಯ ವ್ಯಂಗ್ಯಚಿತ್ರಕಾರರಾದ ಕೆ.ಆರ್. ಸ್ವಾಮಿ ಅವರು ಇಂಡಿಯನ್ ಇಂಕ್ ಹಾಗೂ ಬ್ರಶ್ ಬಳಸುವುದನ್ನು ಕಲಿಸಿದರು. ಅದರಲ್ಲೇ ಮುಂದುವರೆದಿದ್ದ ನಾನೀಗ ಕಂಪ್ಯೂಟರ್‌ನಲ್ಲೂ ಪಳಗಿದ್ದೇನೆ. ವಿ.ಜಿ. ನರೇಂದ್ರ, ಜೇಮ್ಸ್ ವಾಜ್, ರಾಮಧ್ಯಾನಿ ಹಾಗೂ ನಾಡಿನ ಖ್ಯಾತ ವ್ಯಂಗ್ಯಚಿತ್ರಕಾರರು ಬೆನ್ನುಚಪ್ಪರಿಸಿ ಪ್ರೋತ್ಸಾಹಿಸಿದ್ದಾರೆ. ಇತ್ತೀಚೆಗೆ ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್‌ಗಳಲ್ಲೂ ನನ್ನ ಕಾರ್ಟೂನ್‌ಗಳನ್ನು ಹಂಚಿಕೊಳ್ಳುತ್ತಾ ಅಲ್ಲೂ ಅಭಿಮಾನಿ ಬಳಗವನ್ನು ಸಂಪಾದಿಸಿದ್ದೇನೆ. ಅದೇ ಹೆಮ್ಮೆ. ಕಾಲಕ್ಕೆ ತಕ್ಕಂತೆ ಬದಲಾಗಲೇಬೇಕಲ್ಲ?

**◆ ತಮ್ಮ ವ್ಯಂಗ್ಯಚಿತ್ರಗಳನ್ನು ಮೆಚ್ಚಿ, ಪ್ರಶಂಸಿದ ಮರೆಯಲಾಗದ ಕ್ಷಣಗಳೇನಾದರೂ ಇವೆಯಾ?**

ವಿಶ್ವಕನ್ನಡ ಸಮ್ಮೇಳನದಲ್ಲಿ ಏರ್ಪಡಿಸಿದ್ದ ವ್ಯಂಗ್ಯಚಿತ್ರಗಳ ಪ್ರದರ್ಶನಕ್ಕೆ ಬಂದಿದ್ದ ರಾಷ್ಟ್ರಕವಿ ಕುವೆಂಪು ಅವರು ನನ್ನ ವ್ಯಂಗ್ಯಚಿತ್ರಗಳನ್ನು ನೋಡಿ ಮೆಚ್ಚಿದ್ದಲ್ಲದೇ, 'ನಮ್ಮ ಊರಿನ ಪ್ರತಿಭೆ' ಎಂದು ಬೆನ್ನು ತಟ್ಟಿದ್ದರು. ಅದಕ್ಕಿಂತ ಮತ್ತೇನು ಬೇಕು? ಮತ್ತೊಂದು ಬಗೆಯಲ್ಲಿ ಮರೆಯಲಾಗದ ಸಂಗತಿಯೂ ಒಂದಿದೆ. ಆರ್. ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದಾಗ ಹಳೆಯ ಫೈಲ್‌ಗಳ ವಿಲೇವಾರಿ 'ಕಡತ ಯಜ್ಞ' ಯೋಜನೆಗೆ ಸಂಬಂಧಿಸಿದಂತೆ ಒಂದು ಕಾರ್ಟೂನ್ ಮಾಡಿದ್ದೆ. ಅದು ನಮ್ಮ ಇಲಾಖೆಯವರ ಗಮನಕ್ಕೆ ಬಂದು ನೋಟೀಸ್ ಕೊಟ್ಟಿದ್ದರು. ಮತ್ತೆ ಆ ಕಾರ್ಟೂನಿನ ಬಗ್ಗೆ ಸರಿಯಾದ ಸಮಜಾಯಿಷಿ, ಮಾಹಿತಿ ಕೊಟ್ಟ ಮೇಲಷ್ಟೇ ಪ್ರಕರಣ ಇತ್ಯರ್ಥವಾಗಿದ್ದು!

**◆ ನಾಡಿನ ಹೊರಗೂ ತಮ್ಮ ವ್ಯಂಗ್ಯಚಿತ್ರಗಳು ಮನ್ನಣೆಗೆ ಪಾತ್ರವಾಗಿವೆಯಲ್ಲವೇ?**

ದೆಹಲಿಯ 'ಟ್ರೇಡ್ ಫೇರ್ ಅಥಾರಿಟಿ' ಅವರ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಪಕ್ಷಿತಜ್ಞ ಡಾ. ಸಲೀಂ ಆಲಿಯವರ ಕ್ಯಾರಿಕೇಚರ್‌ಗೆ ಬಹುಮಾನ ಬಂದಿತ್ತು. ಅಲ್ಲದೆ 'ಹಿಂದೂಸ್ತಾನ್ ಟೈಮ್ಸ್' ಅವರು ನಡೆಸುತ್ತಿದ್ದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ 'ಅಮರಣಾಂತ ಭೋಜನ'ಕ್ಕೆ ಪುರಸ್ಕಾರ ದಕ್ಕಿತ್ತು.

**◆ ತಮ್ಮ ವ್ಯಂಗ್ಯಚಿತ್ರಗಳಲ್ಲಿ ಸಾಮಾಜಿಕ ಕಾಳಜಿಯ ಪಾತ್ರವೇನು?**

ಆರೋಗ್ಯ ಇಲಾಖೆಯಲ್ಲಿದ್ದಾಗ ಆರೋಗ್ಯದ ಬಗ್ಗೆ ಜನಸಾಮಾನ್ಯರಿಗೆ ಅರಿವನ್ನು ಮೂಡಿಸುವ, ಸಾಮಾಜಿಕ ಕಳಕಳಿಯನ್ನು ಮೂಡಿಸುವ ವ್ಯಂಗ್ಯಚಿತ್ರಗಳನ್ನು ರಚಿಸಿರುವೆ. 'ಬೆತ್ತಲೆಸೇವೆ'ಯ ವಿರುದ್ಧ ಜನಜಾಗೃತಿ ಮೂಡಿಸಲು ಚಂದ್ರಗುತ್ತಿಯಲ್ಲಿ ಪ್ರದರ್ಶನ ನಡೆಸಿದ್ದೆವು. ಹೆಣ್ಣು ಭ್ರೂಣ ಹತ್ಯೆ ವಿರುದ್ಧ, ತುಂಗಾ ನದಿ ಕಲುಷಿತಗೊಳ್ಳುತ್ತಿರುವುದರ ವಿರುದ್ಧ, ಅಣು ವಿದ್ಯುತ್ ಸ್ಥಾವರಗಳ ಅನಾಹುತಗಳ ಬಗ್ಗೆ, ಪರಿಸರ ಸಂರಕ್ಷಣೆಯ ಬಗ್ಗೆ ಹಾಗೂ ಮತದಾನದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ನಡೆಸಿದ ವ್ಯಂಗ್ಯಚಿತ್ರ ಪ್ರದರ್ಶನ–ಕಮ್ಮಟಗಳಲ್ಲಿ ಪಾಲ್ಗೊಂಡಿದ್ದೇನೆ. ನಗಿಸಲಷ್ಟೇ ವ್ಯಂಗ್ಯಚಿತ್ರಗಳನ್ನು ರಚಿಸಿದೇ ಸಮಾಜದ ಡೊಂಕನ್ನು ವ್ಯಂಗ್ಯಚಿತ್ರಗಳ ಮೂಲಕ ತೋರಿಸುವ ಪ್ರಯತ್ನ ಮಾಡುತ್ತಿದ್ದೇನೆ.

2019ರಲ್ಲಿ ಬೆಂಗಳೂರಿನಲ್ಲಿ ನಡೆದ ಹಾಸ್ಯೋತ್ಸವದಲ್ಲಿ ಭಾಗಿಯಾಗಿ ವೇದಿಕೆಯಲ್ಲೇ ನಾಡಿನ ಖ್ಯಾತ ಹಾಸ್ಯಗಾರರ ವ್ಯಂಗ್ಯಭಾವಚಿತ್ರಗಳನ್ನು ರಚಿಸುವ ಯೋಗ ಕೂಡಿಬಂದಿತ್ತು. ಆಳ್ವಾಸ್ 'ವ್ಯಂಗ್ಯಚಿತ್ರ ಸಿರಿ', 'ನಮ್ಮೂರ ಹಬ್ಬ' ಹಾಗೂ ಶ್ರವಣಬೆಳಗೊಳದ ಮಹಾ ಮಸ್ತಕಾಭಿಷೇಕದ ಸಂದರ್ಭದಲ್ಲೂ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸುವ ಭಾಗ್ಯ ಸಿಕ್ಕಿತ್ತು. 'ಸುಧಾ', 'ಮಯೂರ'ಗಳಲ್ಲದೆ ನಾಡಿನ ಎಲ್ಲಾ ವಾರ–ಮಾಸಿಕ ಸಂಚಿಕೆಗಳಲ್ಲಿ ನನ್ನ ಕಾರ್ಟೂನ್‌ಗಳು ಪ್ರಕಟವಾಗಿವೆ. ಆದರೆ, ಇತ್ತೀಚೆಗೆ ನನ್ನ ಹಲವು ವರ್ಷಗಳ ಕಾರ್ಟೂನ್ ಕಲೆಕ್ಷನ್‌ಗಳ ಪುಸ್ತಕವು ಕಳೆದುಹೋಗಿದೆ. ಅದೇ ನೋವು ನನ್ನಲ್ಲಿ ಹೊಸ ಕಾರ್ಟೂನ್‌ಗಳ ರಚನೆಗೆ ಮತ್ತಷ್ಟು ಸ್ಫೂರ್ತಿ ತಂದಿದೆ!